# ಭೈರನ ಟ್ರೇನಿಂಗ್ ಪ್ರಹಸನ

ಸುಮಾ ರಮೇಶ್
ಕಲೆ: ಸಂತೋಷ್ ಸಸಿಹಿತ್ಲು

‘ಸ್ಟೇ... ಸ್ಟೇ... ಸ್ಟೇ... ಸಿಟ್...’ ಹದಿನೈದು ದಿನಗಳಿಂದ ಈ ‘ಸ್ಟೇ...’ ಪದವನ್ನು ಕೇಳಿ ಕೇಳಿ ನನಗೆ ತಲೆನೋವೇ ಶುರುವಾಗಿತ್ತು. ಆದರೂ ಎಗರಿ ಬರುತ್ತಿದ್ದ ನಮ್ಮ ಭೈರನನ್ನು ತಡೆಯಲಾಗದೆ ಡಾಗ್ ಟ್ರೇನರ್ ಮುಲುಕುತ್ತಿದ್ದ.

ಮೂರು ತಿಂಗಳ ಹಿಂದೆ ಮಕ್ಕಳ ಒತ್ತಾಯಕ್ಕೆ ಮಣಿದು, ಕೊಂಡು ತಂದಿದ್ದ ಡಾಬರ್‌ಮನ್ ತಳಿಯ ಶ್ವಾನ ಈ ಭೈರ. ನೋಡಲು ಬಹಳ ಮುದ್ದಾಗಿದ್ದ. ಒಂದೆರಡು ತಿಂಗಳಿಗೆಲ್ಲಾ ಚೆನ್ನಾಗಿ ತಿಂದುಂಡು ದೈತ್ಯದೇಹಿಯಾಗಿ ಬೆಳೆದು ನಿಂತ. ಇದರೊಂದಿಗೆ, ಎಲ್ಲರ ಮುದ್ದು ಮಿತಿಮೀರಿ ಅವನ ಚೇಷ್ಟೆ, ಅಶಿಸ್ತುಗಳು ಹೆಚ್ಚಾದವು. ಅವನಿಗಾಗಿ ಮೀಸಲಿರಿಸಿದ್ದ ಸ್ಥಳದಲ್ಲಿ ಕೂರಲು ಇಚ್ಛಿಸದೆ ನಮ್ಮೊಡನೆ ಸೋಫಾ ಏರಿ ಮನೆಗೆ ಬಂದವರ ಮೇಲೆಲ್ಲಾ ಎಗರುತ್ತಿದ್ದ.

ಆತ್ಮೀಯರೆಲ್ಲ ಗೇಟಿನ ಬಳಿಯೇ ಕತ್ತು ನಿಗುರಿಸಿ ಇವನ ಇರುವಿಕೆಯ ಅರಿವಾದ ಕೂಡಲೇ ಹಾಗೆಯೇ ಪಲಾಯನ ಮಾಡುತ್ತಿದ್ದರು. ಆಹ್ವಾನ ಪತ್ರಿಕೆ ಕೊಡಲು ಬಂದವರು ಒಳಗೆ ಬರಲು ಹಿಂಜರಿದು ಗೇಟಿನ ಬಳಿಯೇ ಪತ್ರಿಕೆ ಸಿಕ್ಕಿಸಿ ಹೋಗುತ್ತಿದ್ದರು. ಮನೆಯ ಚಪ್ಪಲಿ ಶೂಗಳೆಲ್ಲಾ ಇವನ ಆಕ್ರಮಣದಿಂದ ಗಾಯಗೊಂಡು, ಮುನಿದ ಪತಿ ಪತ್ನಿಯರಂತೆ ಒಂದೊಂದು ದಿಕ್ಕಿನಲ್ಲಿ ಬಿದ್ದು ಮಗ್ಗುಲಾಗುತ್ತಿದ್ದವು.

ಭೈರನಿಗೆ ಬೈದು ಬುದ್ಧಿ ಕಲಿಸಲಾಗದೆ ಸೋತು ಕೊನೆಗೆ ಡಾಗ್ ಟ್ರೇನರ್ ನೇಮಿಸಿದೆವು. ತಿಂಗಳಿಗೆ ಐದು ಸಾವಿರದಂತೆ ಮೂರು ತಿಂಗಳಿಗೆ ಹದಿನೈದು ಸಾವಿರ ಎಂದು ನಿಗದಿಪಡಿಸಿದೆವು. ಟ್ರೇನಿಂಗ್ ಮುಗಿದ ನಂತರ ಭೈರ ಹಾಲಿನ ಪ್ಯಾಕೆಟ್, ನ್ಯೂಸ್ ಪೇಪರ್‌ಗಳನ್ನು ಒಳಗೆ ತಂದಿಡುವ ಬಗ್ಗೆ ನಾನು ಕನಸು ಕಾಣುತ್ತಿದ್ದರೆ, ಮಕ್ಕಳೆಲ್ಲ ಅವನನ್ನು ತಮ್ಮ ಸಂಜೆಯ ಕ್ರಿಕೆಟ್‌ಗೆ ಫೀಲ್ಡರ್ ಮಾಡುವ ತವಕದಲ್ಲಿದ್ದರು. ರಿಪಬ್ಲಿಕ್ ಡೇ ಪರೇಡ್‌ನಲ್ಲಿ ಮಾರ್ಚ್–ಫಾಸ್ಟ್ ಮಾಡುವ ವೆಲ್ ಟ್ರೇನ್ಡ್ ಶ್ವಾನಗಳನ್ನು ಕಂಡಿದ್ದ ನಮಗೆ ಭೈರನ ಬಗ್ಗೆ ತರಹೇವಾರಿ ಕನಸುಗಳು ಚಿಗುರತೊಡಗಿದವು.

ಮೊದಲ ದಿನವೇ ಟ್ರೇನರ್ ಮೇಲೆ ಹರಿಹಾಯ್ದ ಭೈರ, ಅವನ ಕೈಯಲ್ಲಿದ್ದ ಕೋಲನ್ನು ಕಂಡು ಬೆಚ್ಚಿ ಹಿಂದೆ ಸರಿದು ಬೊಗಳತೊಡಗಿದ. ಟ್ರೇನರ್ ಭೈರನ ಬೆಲ್ಟಿಗೆ ಕೈಯಿರಿಸಿ ಕೆನಾಪಿಗೆ ಕರೆದೊಯ್ದು, ಕೋಲನ್ನು ನೆಲಕ್ಕೆ ಕುಟ್ಟುತ್ತಾ ಮೇಲೆ ಎಗರಲು ಬಂದ ಅವನಿಗೆ ‘ಸ್ಟೇ... ಸ್ಟೇ...’ ಎನ್ನುತ್ತಾ ಕೋಲಿನ ಬ್ಯಾರಿಕೇಡ್ ಹಾಕಿದ. ಟ್ರೇನಿಂಗ್ ವೈಖರಿಯನ್ನು ನಾವೂ ತೆರೆದ ಬಾಯನ್ನು ಮುಚ್ಚಲು ಮರೆತು ನೋಡತೊಡಗಿದೆವು. ಅವನ ಮೊಗದಲ್ಲಿನ ವಿಶಿಷ್ಟ ಕಳೆ ಅವನು ಈ ಪ್ರಾಂತ್ಯದ ಕಾಣಿಕೆಯಲ್ಲವೆಂದು ಸಾರುತ್ತಿತ್ತು.

ಕೋಲಿನಿಂದಲೇ ಪೊಸಿಷನ್ ತೋರಿಸುತ್ತಾ ‘ಸಿಟ್... ಸ್ಟೇ... ಅಪ್... ಡೌನ್...’ ಎನ್ನುತ್ತಿದ್ದರೆ, ಎಗರಲು ಹೋದ ಭೈರ ಅಲ್ಲೇ ನಿಂತು, ತನ್ನ ಕುತ್ತಿಗೆಯನ್ನಷ್ಟೇ ಅಪ್ ಡೌನ್ ಮಾಡಿ ಗುರಾಯಿಸಿದ. ಟ್ರೇನರ್‌ನ ಕಮಾಂಡಿಂಗ್ ವಾಯ್ಸ್ ಅವನಿಗೆ ಸ್ವಲ್ಪವೂ ಪಥ್ಯವಾಗಲಿಲ್ಲ. ಅವನನ್ನು ಒಲಿಸಿಕೊಳ್ಳಲು ತರಬೇತುದಾರನ ಕಡೆಯಿಂದ ಆದ ಯಾವ ಪ್ರಯತ್ನವೂ ಯಶಸ್ವಿಯಾದಂತೆ ಕಾಣಲಿಲ್ಲ.

ವಾರ ಕಳೆದರೂ ಟ್ರೇನರ್ ಮಾತು, ಆಜ್ಞೆಗೆ ಬೆಲೆ ಕೊಡದೆ ಭೈರ ಸೆಡ್ಡು ಹೊಡೆದು ಕುಳಿತಿದ್ದ. ಅವನ ಆಜ್ಞೆ ಅರ್ಥವಾಗದ್ದಕ್ಕೋ... ಅಥವಾ ಅರ್ಥವಾದರೂ ಇವನ ಮಾತನ್ನೇನು ಕೇಳುವುದು ಎಂಬ ಧಾರ್ಷ್ಟ್ಯವೋ... ಒಟ್ಟಾರೆ ಮೊಂಡ ವಿದ್ಯಾರ್ಥಿಯಂತೆ ಮಂಡಿಯೂರಿ ಕುಳಿತಿದ್ದ. ಟ್ರೇನರ್ ತಾಳ್ಮೆ ಕೆಡುತ್ತಿತ್ತು. ಲೆಫ್ಟ್ ಲೆಗ್... ರೈಟ್ ಲೆಗ್... ಶೇಕ್ ಹ್ಯಾಂಡ್‌ಗಳನ್ನೂ ಕಲಿಸಲು ಪ್ರಯತ್ನಿಸಿದ. ಆದರೆ ಸ್ಟ್ಯಾಂಡ್, ಸಿಟ್‌ನ ಬೇಸಿಕ್ಸ್ ಸರಿಯಾಗಿ ಬೀಳದೆ ಮುಂದಿನ ಹಂತದ ಲೆಫ್ಟ್ ರೈಟ್ ಶೇಕ್ ಹ್ಯಾಂಡ್‌ಗಳು ಸಾಧ್ಯವೇ...?

ಭೈರ ಅಲ್ಲಾಡದೆ ಜಿದ್ದಿಗೆ ಬಿದ್ದು ಗುರಾಯಿಸುತ್ತಾ ಕುಳಿತಿದ್ದ. ಅವನಿಗೆ ಕ್ಲಾಸ್ ನಡೆಯುವಾಗ ಅಲ್ಲೇ ಅಡ್ಡಾಡುತ್ತಿದ್ದ ಬೀದಿ ನಾಯಿಗಳು ಅವನೆಡೆಗೆ ಮರುಕದಿಂದ ನೋಡುತ್ತಾ ಸಾಗುತ್ತಿದ್ದವು. ಭೈರನಿಗೆ ಮೊದಲ ಬಾರಿಗೆ ಬೀದಿ ನಾಯಿಗಳಿಗಿರುವ ಸ್ವಾತಂತ್ರ್ಯ, ಸ್ವೇಚ್ಛೆಯ ಅರಿವಾಗಿ ಅವುಗಳ ಮೇಲೆ

